ಮಂಗಳೂರು
ಶುಕ್ರವಾರ
2 ಫೆಬ್ರವರಿ 2018
ಹೇಮಲಂಬಿ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮಘ
ಬೆಲೆ ₹ 5.00

# ಹೊಸ ದಿಗಂತ

ಸಂಪುಟ 39, ಸಂಚಿಕೆ 307, ಪುಟಗಳು 12+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kod

# ಫೆ. 3-4: ಸಹ್ಯಾದ್ರಿ ಕಾಲೇಜು ಮೈದಾನದಲ್ಲಿ ಜಿಪಿಎಲ್ ಕ್ರಿಕೆಟ್ ಸಂಭ್ರಮ

**ಮಂಗಳೂರು:** ಬಹು ನಿರೀಕ್ಷೆಯ ಜಿಪಿಎಲ್ ಕ್ರಿಕೆಟ್-2018 ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಹುಲ್ಲುಹಾಸಿನ ಮೈದಾನದಲ್ಲಿ ಫೆ. 3 ಮತ್ತು 4 ನಾಲ್ಕರಂದು ಅಹರ್ನಿಶಿ ನಡೆಯಲಿದ್ದು ಸುಮಾರು ಹತ್ತರಿಂದ ಹದಿನೈದು ಸಾವಿರ ಜಿಎಸ್‌ಬಿ ಸಮಾಜದ ಕ್ರೀಡಾ ಪ್ರೇಮಿಗಳು ಕರಾವಳಿ ಕರ್ನಾಟಕದ ವಿವಿಧ ಭಾಗಗಳಿಂದ ಆಗಮಿಸಲಿದ್ದಾರೆ.

ಫೆ. 3 ರಂದು ಸಂಜೆ 4.30 ಕ್ಕೆ ಭಾರತದ ಮಾಜಿ ಕ್ರಿಕೆಟಿಗ ರೋಜರ್ ಬಿನ್ನಿ ಈ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ. ಡೇವಿಡ್ ಜಾನ್ಸನ್ ಬ್ಯಾಟಿಂಗ್ ಮಾಡುವ ಮೂಲಕ ವಿಶಿಷ್ಟವಾಗಿ ಪಂದ್ಯಾಟಕ್ಕೆ ಸಾಕ್ಷಿಯಾಗಲಿದ್ದಾರೆ. ಸಮಾರಂಭದಲ್ಲಿ ಫುಜ್ಲಾನ್ ಸಂಸ್ಥೆಯ ಚೇರ್‌ಮೆನ್ ಅಚ್ಯುತ್ ಪೈ, ಫುಜ್ಲಾನ್ ಸಂಸ್ಥೆಯ ಪ್ರಕಾಶ್ ಪೈ, ಅನಂತ್ ಪೈ, ಭಾರತ್ ಬೀಡಿ ವರ್ಕ್ಸ್‌ನ ಅನಂತ್ ಪೈ, ಯಜಮಾನ್ ಗ್ರೂಪ್‌ನ ವರದರಾಜ್ ಪೈ, ಫಿನ್ ಪವರ್ ದುಬೈನ ರಾಜೇಶ್ ಶೆಣೈ, ರಥಬೀದಿ ವೆಂಕಟರಮಣ ದೇವಸ್ಥಾನದ ಟ್ರಸ್ಟಿ ಪದ್ಮನಾಭ ಪೈ, ಮುಂತಾದ ಗಣ್ಯರು ಭಾಗವಹಿಸಲಿದ್ದು ಕ್ರೀಡಾಪಟುಗಳನ್ನು ಹುರಿದುಂಬಿಸಲಿದ್ದಾರೆ.

ಈ ಬಾರಿಯೂ ಒಟ್ಟು ಎಂಟು ತಂಡಗಳು ಭಾಗವಹಿಸಲಿದ್ದು ಎಲ್ಲ ಪಂದ್ಯಾಟಗಳು ಎಂಟು ಓವರ್‌ಗಳದ್ದಾಗಿವೆ. ಕೋಟೇಶ್ವರದ ರಾಯ್ಸ್ ಸ್ಟ್ರೈಕರ್ಸ್, ಕೊಡಿಯಾಲ್ ಸೂಪರ್ ಕಿಂಗ್ಸ್, ಕಾರ್ಕಳದ ಕೆಬಿಸಿ, ಡೆಡ್ಲಿ ಪ್ಯಾಂಥರ್ಸ್ ಕೊಡಿಯಾಲ್‌ಬೈಲ್, ಮುಂಬೈ ಪಾಲ್ಟನ್ಸ್, ಆರ್ ಕೆ ನೈಟ್ ರೈಡರ್ಸ್, ಪರ್ಲ್ ಸಿಟಿ ಕ್ರಿಕೆಟರ್ಸ್, ಭದ್ರಾ ಚಾಲೆಂಜರ್ಸ್ ಬಂಟ್ವಾಳ ತಂಡಗಳು ಪ್ರಥಮ ಬಹುಮಾನ ರೂಪಾಯಿ 2,22,222 ಮತ್ತು ಆಕರ್ಷಕ ಟ್ರೋಫಿಗಾಗಿ ಸೆಣಸಲಿವೆ. ಪ್ರಥಮ ರನ್ನರ್ ಅಪ್ ತಂಡಕ್ಕೆ 1,77,777 ರೂಪಾಯಿ ಮತ್ತು ಆಕರ್ಷಕ ಟ್ರೋಫಿ ಮತ್ತು ಎರಡನೇ ರನ್ನರ್ ಅಪ್ ತಂಡಕ್ಕೆ 1,11,111 ರೂಪಾಯಿ ಮತ್ತು ಆಕರ್ಷಕ ಟ್ರೋಫಿ ಸಿಗಲಿದೆ. ಪ್ರತಿ ಪಂದ್ಯದಲ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿ ಮತ್ತು ಸುಝುಕಿ ಜಿಕ್ಸರ್ ಬೈಕ್ ಅನ್ನು ಸರಣಿ ಶ್ರೇಷ್ಠ ಪ್ರಶಸ್ತಿಯಾಗಿ ನೀಡಲಾಗುವುದು.

ಈ ಬಾರಿಯ ಜಿಪಿಎಲ್ 2018 ರ ವಿಶೇಷತೆ ಎಂದರೆ ಮಹಿಳಾ ಕ್ರಿಕೆಟ್ ಪಂದ್ಯಾಟ ಕೂಡ ನಡೆಯಲಿದೆ.

ಹೈದ್ರಾಬಾದಿನ ಫುಜ್ಲಾನ್ ಸಂಸ್ಥೆ ಈ ಬಾರಿಯ ಜಿಪಿಎಲ್-2018 ರ ಪ್ರಮುಖ ಪ್ರಾಯೋಜಕತ್ವ ವಹಿಸಿಕೊಂಡಿದೆ. ಭಾರತ್ ಬೀಡಿ ವರ್ಕ್ಸ್ ಮಂಗಳೂರು, ಎಸ್ಟೋಲ್ ಪೈಪ್ಸ್, ಫಿನ್ ಪವರ್ ದುಬೈ, ಯಜಮಾನ ಫಿಕ್ಕಲ್ಸ್ ಸಹಪ್ರಾಯೋಜಕತ್ವ ವಹಿಸಿಕೊಂಡಿವೆ. ಮೊದಲ ಪಂದ್ಯ ಶನಿವಾರ ಸಂಜೆ ಪ್ರಾರಂಭವಾಗಲಿದ್ದು ಮರುದಿನ ರಾತ್ರಿ 9.30 ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಫುಜ್ಲಾನ್ ಸಂಸ್ಥೆಯ ಚೇರ್ ಮೆನ್ ಅಚ್ಯುತ್ ಪೈ., ಸಂಸ್ಥೆಯ ಅಧ್ಯಕ್ಷ ಅಭಿಜಿತ್ ಪೈ., ಸಹ್ಯಾದ್ರಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಮಂಜುನಾಥ ಭಂಡಾರಿ, ಗಣೇಶ್ ಬೀಡಿ ವರ್ಕ್ಸ್ ಜಗನ್ನಾಥ್ ಶೆಣೈ, ಎಸ್ಟೋಲ್ ಪೈಪ್‌ನ ಬಿನೂ ಪಿಳ್ಳೈ, ಪರಮಾನಂದ ಎಂಟರ್ ಪ್ರೈಸಸ್‌ನ ನಿತಿನ್ ಕಾಮತ್, ಐಡಿಯಲ್ ಐಸ್ ಕ್ರೀಂನ ಮುಕುಂದ್ ಕಾಮತ್, ದೇವಗಿರಿ ಚಹಾದ ನಂದಗೋಪಾಲ್ ಶೆಣೈ, ಮಹಾರಾಜ ಹೋಟೆಲ್ಸ್‌ನ ಸುಬ್ಬಣ್ಣ ಪ್ರಭು ಭಾಗವಹಿಸಲಿದ್ದಾರೆ.

ಎರಡೂ ದಿನಗಳಂದು ಆಗಮಿಸುವ ಜಿಎಸ್‌ಬಿ ಕ್ರೀಡಾಪ್ರೇಮಿಗಳಿಗೆ ಕಾಮತ್ ಕೇಟರರ್ಸ್ ಮಸಾಲಾ ದೋಸಾ, ಸೆಟ್ ದೋಸಾ ಮತ್ತು ನಾನ್ ವೆಜ್ ವಿಶೇಷ ಖಾದ್ಯಗಳಾದ ಚಿಕನ್ ಚಿಲ್ಲಿ ಡ್ರೈ ಮತ್ತು ಇತರ ತಿನಿಸುಗಳು, ಶ್ರೇಯಾ ಸ್ವೀಟ್‌ನ ಚಾಟ್ ಕೌಂಟರ್, ತಂದೂರ್ ರೆಸ್ಟೋರೆಂಟ್‌ನ ಚಿಕನ್ ಕಬಾಬ್, ಐಡಿಯಲ್ ಐಸ್ ಕ್ರೀಂ, ಶಿರಗುಪ್ಪಾ ಗಿರಮಿಟ್ ಮತ್ತು ಗದಗ ಗಿರಮಿಟ್ ವಿಶೇಷ ಖಾದ್ಯಗಳು, ಬಳ್ಳಿಯವರ ಕರಿದ ತಿಂಡಿ ತಿನಿಸುಗಳು, ಟ್ವಿಸ್ಟರ್ ಪೊಟೆಟೊ ತಿಂಡಿಗಳು, ಬೂನ್ ತಂಪು ಪಾನೀಯಗಳು, ಭದ್ರಾ ಕಬ್ಬಿನ ರಸ, ಗೋಕುಲ್ ಪ್ರಭು ಅವರ ಸ್ಪೆಶಲ್ ಚರುಂಬುರಿ ಉಪ್ಕರಿ ಸ್ಟಾಲ್‌ಗಳ ಸಹಿತ ಇತರ ವಿಶೇಷ ತಿಂಡಿ ತಿನಿಸುಗಳು ಜನರ ಆಕರ್ಷಿಸಿ ಉದರ ತಣಿಸಲಿವೆ.

ಮಂಗಳೂರು ನಗರ ದಕ್ಷಿಣ ಬಿಜೆಪಿ ಅಧ್ಯಕ್ಷ ಡಿ ವೇದವ್ಯಾಸ ಕಾಮತ್, ಕೊಡಿಯಾಲ್ ಸ್ಪೋರ್ಟ್ಸ್ ಅಸೋಸಿಯೇಶನ್ ಅಧ್ಯಕ್ಷ ಶಿವಾನಂದ ಶೆಣೈ, ಕಾರ್ಯದರ್ಶಿ ಕೆ. ನರೇಶ್ ಪ್ರಭು, ಕೋಶಾಧಿಕಾರಿ ಚೇತನ್ ಕಾಮತ್ ಪ್ರಮುಖ ಪ್ರಮೋಟರ್ಸ್‌ಗಳಾಗಿದ್ದಾರೆ.

